
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ನವಂಬರ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 11 ಪ್ರಕಟಣೆ : 15-11-2023


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



'ಜಸ್ಟೀಸ್ ಎನ್. ಡಿ. ಕೃಷ್ಣ ರಾವ್ ಮೆಮೋರಿಯಲ್ ಟ್ರಸ್ಟ್', ಬೆಂಗಳೂರು ಇದರ ವತಿಯಿಂದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,50,000/-** (ರೂಪ್ಯಾ ಒಂದು ಲಕ್ಷದ ಐವತ್ತು ಸಾವಿರ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಈ ಸಂಸ್ಥೆಯ ಎಲ್ಲಾ ಟ್ರಸ್ಟಿಗಳಿಗೆ ಮತ್ತು ಕಾರ್ಯದರ್ಶಿಗಳಾದ ಶ್ರೀಮತಿ ಅನುರಾಧ ಅಬ್ರಹಾಂರವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.




ಕರ್ಣಾಟಕ ಬ್ಯಾಂಕ್‌ನ ನಿವೃತ್ತ ಜಿ.ಎಂ. ಬೊಕ್ಕಸ ಶ್ರೀ ಚಂದ್ರಶೇಖರ ರಾವ್ ತಮ್ಮ ಮಾತಾಪಿತರಾದ ಬೊಕ್ಕಸ ಅಣ್ಣಪ್ಪಯ್ಯ ಮತ್ತು ಸರಸ್ವತಿ ಅಮ್ಮನವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,001/-** (ರೂಪ್ಯಾ ಒಂದು ಲಕ್ಷದ ಒಂದು) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರುಗಳಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.

ಶ್ರೀಮತಿ ಗಿರಿಜಾ ರಾವ್ ಮತ್ತು ಮಕ್ಕಳು ಅವರ ಪತಿ ಕುಕ್ಕೆಹಳ್ಳಿ ಸುಬ್ಬರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000/-** (ರೂಪ್ಯಾ ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ದೇಣಿಗೆಯನ್ನು ಪಡೆದಿದ್ದು, ಅವರ ಕುಟುಂಬಸ್ಥರು ಉಪಸ್ಥಿತರಿದ್ದರು.






ಮಂಗಳೂರು ನಿವಾಸಿ, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ತಮ್ಮ ಪತಿ ಶ್ರೀ ಪಿ. ಎಸ್. ಪ್ರಭಾಕರ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000** (ರೂಪ್ಯಾ ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಹರ್ಷ ಕುಮಾರ್ ಕೇದಿಗೆ, ಉಪಾಧ್ಯಕ್ಷ ಡಾ। ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. **18-11-2023**ನೇ ಶನಿವಾರ ಸಂಜೆ ಗಂಟೆ **5-30**ಕ್ಕೆ

### ದೀಪಾವಳಿ ಆಚರಣೆಯನ್ನು

ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ವಿನೋದಾತ್ಮಕ ಆಟಗಳು, ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿನಂತಿಸುತ್ತೇವೆ.

ಆ ದಿನದ ವೆಚ್ಚಗಳ ಬಗ್ಗೆ ಪ್ರಾಯೋಜಕರನ್ನು ಅಪೇಕ್ಷಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

**ಬಹುಮಾನಗಳ ಪ್ರಾಯೋಜಕರು**

ಶ್ರೀಮತಿ ಪ್ರಭಾ ಪ್ರಭಾಕರ್ ರಾವ್
ಮತ್ತು ಶ್ರೀಮತಿ ಮಂಜುಳಾ ಮುರಳೀಧರ್

**●● ಹೆಚ್ಚಿನ ಮಾಹಿತಿಗಾಗಿ ●●**

| | |
|---|---|
| ಶ್ರೀ ಅನಿಲ್ ಎನ್. | ✆ : 9448815172 |
| ಶ್ರೀ ಸುರೇಶ್ ಕಡಬ | ✆ : 9972760673 |
| ಶ್ರೀಮತಿ ಕುಸುಮಾ ನವೀನ್ ಕುಮಾರ್ | ✆ : 9480760904 |
| ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ | ✆ : 9739155359 |

**ಜ್ಞಾನಶಕ್ತಿ ಮಾಸಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು - 9448481696

ಸಂಪಾದಕರು :
ಪಿ. ಶ್ರೀಕಾಂತ್ ರಾವ್
9343361618

ಸಂಪಾದಕ ಮಂಡಳಿ :
- ನಾಗರಾಜ್ ವರ್ಕಾಡಿ
- ರಘುವೀರ್ ಪೆರ್ಡೂರು
- ಟಿ. ಬಿ. ಮೋಹನ್ ರಾವ್
- ಸ್ವಾತಿ ಪ್ರಮೋದ್ ಕ್ಯಾದಿಗೆ


ಆರ್ಥಿಕ ಸಲಹಾ ಸಮಿತಿ :
- ಕರುಣ್ ರಾವ್ ಬೆಳ್ಳೆ
- ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
- ಚೇತನ್ ಶರ್ಮ
- ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ

7795116598 ✆ : 9343361618
e-mail :
jnanashakthisss@gmail.com

## ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು



ಕರ್ನಾಟಕದ ಕನ್ನಡ ರಾಜ್ಯೋತ್ಸವದ ಸುಸಂದರ್ಭದಲ್ಲಿ ಕನ್ನಡ ನಾಡು–ನುಡಿ–ಕಲೆ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೊಡಮಾಡುವ ಉಡುಪಿ 'ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ'ಗೆ ಆಯ್ಕೆಯಾದ ಯಕ್ಷಗಾನ ಪ್ರಸಂಗ ಕರ್ತರು ಹಾಗೂ ಯಕ್ಷಗುರು ಶ್ರೀ **ಪಾವಂಜೆ ಮಂಜುನಾಥಯ್ಯ** ಇವರಿಗೆ ಹಾರ್ದಿಕ ಅಭಿನಂದನೆಗಳು.



ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿ (ಯಕ್ಷಗಾನ) **ಶ್ರೀ ಎಂ. ದೇವಾನಂದ್ ಭಟ್** ಆಯ್ಕೆಯಾಗಿದ್ದಾರೆ.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಕಾಸರಗೋಡು ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶ



ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶವು ದಿನಾಂಕ 05–11–2023ನೇ ರವಿವಾರ ಕೂಡ್ಲು, ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು. ಶ್ರೀ ಕೆ. ಜಿ. ಶ್ಯಾನುಭೋಗ್ ಅಧ್ಯಕ್ಷತೆ ವಹಿಸಿದ್ದ ಮಹಾಸಭೆಯಲ್ಲಿ ಗತ ಒಂದು ವರ್ಷದ ಅವಧಿಯಲ್ಲಿ ದೈವಾಧೀನರಾದ ಬಂಧುಗಳಿಗೆ ಗೌರವ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಆ ಬಳಿಕ ಕಾರ್ಯದರ್ಶಿ ಶ್ರೀ ಮನೋಹರ ಎ. ಮತ್ತು ಮಹಿಳಾ ಘಟಕದ ಕಾರ್ಯದರ್ಶಿ ಶ್ರೀಮತಿ ಮಾಲತೀ ಜಗದೀಶ್ ಇವರು ಗತವರ್ಷದ ವರದಿ ಮಂಡನೆ ಮಾಡಿದರು. ಕೋಶಾಧಿಕಾರಿ ಶ್ರೀ ವಸಂತರಾಜ ವಿ. ಪಿ. ಮತ್ತು ಮಹಿಳಾ ಘಟಕದ ಕೋಶಾಧಿಕಾರಿ ಶ್ರೀಮತಿ ಸುಮಂಗಲಾ ಮನೋಹರ್ ಇವರು ಲೆಕ್ಕಪತ್ರಗಳನ್ನು ಮಂಡಿಸಿದರು. ಮಹಾಸಭೆಯು ಅವುಗಳನ್ನು ಅಂಗೀಕರಿಸಿತು.

ಅನಂತರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಮ್ಮ ಬಾಂಧವರೇ ಆದ ಇಸ್ರೋ ವಿಜ್ಞಾನಿ ಶ್ರೀ ಕೃಷ್ಣಮೋಹನ ಶ್ಯಾನುಭೋಗ್, ಎರೆಪ್ಪಾಡಿ ಇವರು ಸಭಾದ ವಾರ್ಷಿಕ ಸಂಚಿಕೆ 'ಶಿವಗಂಗಾ'ವನ್ನು ಬಿಡುಗಡೆ ಮಾಡಿದರು. ಇಸ್ರೋದ ಮೂಲಕ ಚಂದ್ರಯಾನ–3, ಗಗನಯಾನ ಮುಂತಾಗಿ ದೇಶದ ಬಾಹ್ಯಾಕಾಶ ಸಂಶೋಧನಾ ಕಾರ್ಯಗಳಿಗೆ ನೆರವಾಗುತ್ತಿರುವ ಶ್ರೀಯುತರನ್ನು ಸನ್ಮಾನಿಸಿ ಗೌರವಿಸಲಾಯಿತು. ಅವರಿಗೆ 'ಸಮಾಜ ರತ್ನ ಪ್ರಶಸ್ತಿ' (ಪ್ರಾಯೋಜಕರು : ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ, ಕಾಸರಗೋಡು)ಯನ್ನೂ ನೀಡಿ ಆದರಿಸಲಾಯಿತು. ಕೂಡ್ಲು ವಿಷ್ಣುಮಂಗಲದ ಹವ್ಯಾಸಿ ಲೇಖಕ, ನಿವೃತ್ತ ಬ್ಯಾಂಕ್ ಉದ್ಯೋಗಿ ಶ್ರೀ ವಿಷ್ಣು ಶ್ಯಾನುಭೋಗ್ (ಶಾನ್ ಕಾಸರಗೋಡು) ಇವರು ಸಂಪಾದಿಸಿದ ಕ್ಷೇತ್ರ ಪರಿಚಯ ಕೃತಿ 'ಕುತ್ಯಾಳ ಶ್ರೀ'ಯನ್ನು ಶ್ರೀ ಮುರಳೀಧರ ಕಾಸರಗೋಡು ಇವರು ಬಿಡುಗಡೆ ಮಾಡಿದರು. ಈ ಕೃತಿಯ ಮಲಯಾಳಂ ಅನುವಾದಕರಾದ ಶ್ರೀ ಮಹಾಲಿಂಗೇಶ್ವರ ರಾಜ್ ಇವರು ಕೃತಿ ಪರಿಚಯ ಮಾಡಿದರು. ಮಹಿಳಾ ಘಟಕದ ಉಪಾಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಶ್ಯಾನುಭೋಗ್ ಸ್ವಾಗತಿಸಿ, ಜತೆ ಕಾರ್ಯದರ್ಶಿ ಶ್ರೀಮತಿ ನಯನಾ ಶಂಕರರಾಜ್ ವಂದಿಸಿದರು.

ಆ ಬಳಿಕ ಸಮಾಜದ ಕಲಾವಿದ – ಕಲಾವಿದೆಯರಿಂದ ಹಾಡು, ನೃತ್ಯ, ಹಾಸ್ಯ ಮುಂತಾದ ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಹೆಸರಾಂತ ಲೇಖಕ – ಕಲಾವಿದರಾದ ಶ್ರೀರಾಂ ಎಲ್ಲಂಗಳ ಇವರು ಬರೆದು, ನಿರ್ದೇಶಿಸಿ ಸ್ವತಃ ಅಭಿನಯಿಸಿದ 'ಶ್ರೀ ಕುತ್ಯಾಳ ಕ್ಷೇತ್ರ ವೈಭವ' ನೃತ್ಯರೂಪಕವು ಪ್ರಧಾನ ಆಕರ್ಷಣೆಯಾಗಿತ್ತು.

ಅಪರಾಹ್ನ ನಡೆದ ಜಿಲ್ಲಾ ಸಮಾವೇಶವನ್ನು ನಮ್ಮ ಬಂಧುವೇ ಆದ ಡಾ। ಈಶ್ವರ ಚಂದ್ರ ಚೇನೆಕ್ಕೋಡು (ಡೀನ್, ಟಿ.ಐ.ಎಫ್.ಆರ್., ಪುಣೆ) ಇವರು ಉದ್ಘಾಟಿಸಿ, ಸಂಘಟನೆಗೆ ಶುಭವನ್ನು ಹಾರೈಸಿದರು. ಸಮಾಜದ ಹಿರಿಯ ಸದಸ್ಯ, ರಾಜ್ಯಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಶ್ರೀ ಮರ್ದಂಬೈಲು ಉಮೇಶ್ ರಾವ್ ಇವರು ಸಭಾಕ್ಕೆ ಸ್ವಂತವಾದ ಕಟ್ಟಡವೊಂದನ್ನು ನಿರ್ಮಿಸಬೇಕೆಂಬ ಆಶಯವನ್ನು ತಮ್ಮ ಪ್ರತಿನಿಧಿಗಳ ಮೂಲಕ ಮಂಡಿಸಿ ರೂ. 1 ಲಕ್ಷ ದೇಣಿಗೆ ನೀಡಿ ಕಟ್ಟಡ ನಿರ್ಮಾಣ ನಿಧಿಗೆ ಚಾಲನೆ ನೀಡಿದರು.

ಆ ಬಳಿಕ ಸಮಾಜದ ಹಿರಿಯ ಚೇತನಗಳಾದ ಶ್ರೀ ರಾಮಕೃಷ್ಣ ಮರ್ದಂಬೈಲು ಮತ್ತು ಶ್ರೀಮತಿ ಸಾಗರಿ ಮರ್ದಂಬೈಲು ಇವರಿಗೆ ಗೌರವಾರ್ಪಣೆ ಮಾಡಲಾಯಿತು. ವಿವಿಧ ಪ್ರಾಯೋಜಿತ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಶ್ರೀ ಕಂಬಾರು ಕೇಶವ ಭಟ್ (ಯಕ್ಷಸಿರಿ), ಶ್ರೀ ಗೋಪಾಲಕೃಷ್ಣ ರಾವ್ ಬೇವಿಂಜೆ (ಸಮಾಜ ಸೇವೆ), ಶ್ರೀಮತಿ ಪ್ರಭಾ ರಮೇಶ್ ಮಧೂರು (ಸಮಾಜಕೀರ್ತಿ), ಕು। ಶ್ರಾವ್ಯಶ್ರೀ ಉಬರಳೆ (ಕಲಾಸಿರಿ), ಮಾ। ಬೃಜೇಶ್ ಮೋಹನ್ (ಕ್ರೀಡಾರತ್ನ) ಕು। ವಿಸ್ಮಯಾ ಕುಂಬಳೆ (ಲಲಿತಕಲೆ) ಇವರು ಪುರಸ್ಕೃತರು. ಶೈಕ್ಷಣಿಕ ರಂಗದಲ್ಲಿ ಶ್ರೇಷ್ಠ ಸಾಧಕರಿಗೆ ಪ್ರತಿಭಾ ಪುರಸ್ಕಾರ, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ, ವಿವಿಧ ಸ್ಪರ್ಧಾವಿಜೇತರಿಗೆ ಬಹುಮಾನ ವಿತರಣೆ, ಮಕ್ಕಳಿಗೆ ಸವಿನೆನಪಿನ ಉಡುಗೊರೆ ವಿತರಣೆ ಮುಂತಾದ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು. ಡಾ। ಎಂ. ಸತ್ಯನಾಥ್ ಸ್ವಾಗತಿಸಿ, ಕಾರ್ಯದರ್ಶಿ ಶ್ರೀ ಮನೋಹರ ಎ. ವಂದಿಸಿದರು. ಪ್ರೊ। ಶ್ರೀನಾಥ್, ಶ್ರೀರಾಂ ಎಲ್ಲಂಗಳ, ಶ್ರೀ ರಾಜೇಂದ್ರ ಬಜಕೂಡ್ಲು, ಶ್ರೀಮತಿಯರಾದ ನಯನಾ ಶಂಕರರಾಜ್, ವಿಜಯಲಕ್ಷ್ಮಿ ಉಬರಳೆ, ಶರ್ಮಿಳಾ ಎ., ವೀಣಾ ಪ್ರಸನ್ನ ಶ್ಯಾನುಭೋಗ್ ನಿರೂಪಣೆಯಲ್ಲಿ ಸಹಕರಿಸಿದರು.


## ಶ್ರೀಮತಿ ಶುಭಾ ಮಂಜುನಾಥ್‌ಗೆ ಡಾಕ್ಟರೇಟ್



ಶ್ರೀಯುತ ಬಾರಕೂರು ಮಸ್ಕಿಬೈಲು ಶ್ರೀ ಶ್ರೀಧರ ರಾವ್ ಮತ್ತು ಶ್ರೀಮತಿ ಜಯಶ್ರೀ ಅವರ ಪುತ್ರ, ಶ್ರೀಯುತ ಮಂಜುನಾಥ್ ರಾವ್ ಅವರ ಪತ್ನಿ, ಡಾ। ಅಡೂರು ಸಂತೋಷ್ ರಾವ್ ಮತ್ತು ಡಾ। ಗೀತಾ ಅವರ ಸುಪುತ್ರಿ ಶ್ರೀಮತಿ ಶುಭಾ ಅವರು 'ಟೊಮ್ಯಾಟೋದ ಇನ್‌ಬ್ರೆಡ್ ತಳಿಗಳಲ್ಲಿ ಇಳುವರಿ ಮತ್ತು ಹಣ್ಣಿನ ಗುಣಮಟ್ಟದ ಗುಣಲಕ್ಷಣಗಳ ವೈವಿಧ್ಯತೆ ಮತ್ತು ಸ್ಥಿರತೆಯ ವಿಶ್ಲೇಷಣೆ' ಎಂಬುದರ ಮೇಲಿನ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪಡೆದು ನಮ್ಮ ಸಮಾಜಕ್ಕೆ ಹೆಮ್ಮೆ ತಂದಿದ್ದಾರೆ.

ಇವರು ಬೆಂಗಳೂರು ತೋಟಗಾರಿಕೆ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಡಾ। ಬಿ. ಲಿಂಗಯ್ಯ ತೋಟಗಾರಿಕಾ ಕಾಲೇಜು ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಬರೆದ ಈ ಮಹಾಪ್ರಬಂಧಕ್ಕೆ ತೋಟಗಾರಿಕಾ ವಿಶ್ವವಿದ್ಯಾನಿಲಯ ಬಾಗಲಕೋಟದಿಂದ ಪಿ.ಎಚ್.ಡಿ. ಡಾಕ್ಟರೇಟ್ ಲಭಿಸಿದೆ. ಇವರು ಅಡೂರು ಶಿವಬ್ರಾಹ್ಮಣರ ಮಹಾಸಭಾದ ಮಾಜಿ ಕಾರ್ಯದರ್ಶಿ ದಿ। ಅಡೂರು ಶ್ರೀಧರ ರಾಯರ ಮೊಮ್ಮಗಳು.

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಮೈಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241





ಶ್ರೀ ಸುಬ್ರಹ್ಮಣ್ಯ ಸಭಾದ 'ನಾಡಹಬ್ಬ' ಕಾರ್ಯಕ್ರಮದಲ್ಲಿ ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನ ವತಿಯಿಂದ ಶ್ರೀ ಕೆ. ಸದಾಶಿವ ಶಾಸ್ತ್ರೀ ಮತ್ತು ಸೌಭದ್ರಾ ಶಾಸ್ತ್ರೀಯವರು ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ಕಲಾವಿದರು ಮತ್ತು ಕಲಾವಿದೆಯರನ್ನು ಸನ್ಮಾನಿಸಿದರು. ಇದೇ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿ ವತಿಯಿಂದ ಶ್ರೀ ಕೆ. ಸದಾಶಿವ ಶಾಸ್ತ್ರೀ ದಂಪತಿಗಳನ್ನು ಸನ್ಮಾನಿಸಲಾಯಿತು.



ಶ್ರೀ ಸುಬ್ರಹ್ಮಣ್ಯ ಸಭಾದ 'ನಾಡಹಬ್ಬ' ಕಾರ್ಯಕ್ರಮದಲ್ಲಿ ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನ ವತಿಯಿಂದ ಶ್ರೀ ಕೆ. ಸದಾಶಿವ ಶಾಸ್ತ್ರೀ ಮತ್ತು ಸೌಭದ್ರಾ ಶಾಸ್ತ್ರೀಯವರು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಸನ್ಮಾನಿಸಿದರು.

## ಭಜನಾ ಸೇವೆ




ನವರಾತ್ರಿಯ ಪ್ರಥಮ ದಿನ ರವಿವಾರ 15-10-2023ರಂದು ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯ ಭಜನಾ ಸೇವೆ ನಡೆಯಿತು. ಶ್ರೀ ಸುಬ್ರಹ್ಮಣ್ಯ ಸಭಾ ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, CA. ನಾಗರಾಜ್ ಶರ್ಮಾ, ಶ್ರೀ ಶ್ರೀನಿವಾಸ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಪದಾಧಿಕಾರಿಗಳಾದ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್, ಶ್ರೀಮತಿ ಕ್ಷಮಾ ಹರಿನಾರಾಯಣ್ ಭಾಗವಹಿಸಿದರು. ಹಾರ್ಮೋನಿಯಂನಲ್ಲಿ ಶ್ರೀ ಹರಿನಾರಾಯಣ್, ತಬಲಾದಲ್ಲಿ ಶ್ರೀ ಕೃಷ್ಣರಾಜ್ ಪೆರ್ಡೂರ್ ಸಹಕರಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದ ನಾಡಹಬ್ಬ ಸ್ಪರ್ಧಾ ವಿಜೇತರು

**ಹುಲಿಕುಣಿತ : ಪುರುಷರ ವಿಭಾಗ :**

1. ಶ್ರೀ ಶ್ರೀಹರಿ ಅದ್ಯಪಾಡಿ 2. ಶ್ರೀ ಶ್ರೀಧರ್ ರಾವ್

**ಮಹಿಳಾ ವಿಭಾಗ :** 1. ಶ್ರೀಮತಿ ಪುಷ್ಪಾ ಶ್ರೀನಿವಾಸ 2. ಶ್ರೀಮತಿ ಸ್ನೇಹಲತಾ ದಿವಾಕರ್

**ಮಕ್ಕಳ ವಿಭಾಗ :** 1. ಆದೀಶ್ ಅದ್ಯಪಾಡಿ 2. ಸ್ಕಂದ ಪ್ರಸಾದ್

---

**ಸುಗಮ ಸಂಗೀತ ಸ್ಪರ್ಧೆ : (5ರಿಂದ 15 ವರ್ಷದ ವಿಭಾಗ)**

1. ದೇವಾಂಶ್ ರಾವ್ 2. ಆದೀಶ್ ಅದ್ಯಪಾಡಿ

**16ರಿಂದ 50 ವರ್ಷದ ವಿಭಾಗ :** 1. ಇಶಾನ್ 2. ಯಶಸ್ ರಾವ್

**50ರಿಂದ ಮೇಲ್ಪಟ್ಟವರ ವಿಭಾಗ :** 1. ಸುಜಾತಾ ಕಟೀಲ್ 2. ಉಷಾ ನಟರಾಜ್

---

**ಚಿತ್ರ ಬಿಡಿಸುವ ಸ್ಪರ್ಧೆ ಜೂನಿಯರ್ ವಿಭಾಗ :**

1. ಪ್ರಣತಿ ರಾವ್ 2. ಪ್ರತೀಕ್ ಪಿ.ಎಸ್. 3. ಆದೀಶ್ ಅದ್ಯಪಾಡಿ

**ಸೀನಿಯರ್ ವಿಭಾಗ :** 1. ಅದಿತಿ ರಾವ್ 2. ಪೃಥ್ವಿ ಪಿ.ಎಸ್. 3. ಅಲೋಕ್ ರಾವ್

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕಾರ್ಯಕಾರಿ ಸಮಿತಿಯ 2024-2027ನೇ ಸಾಲಿನ ಪದಾಧಿಕಾರಿಗಳು

**ಅಧ್ಯಕ್ಷರು :** ಶ್ರೀ ಮಂಜುನಾಥ ಹೆಬ್ಬಾರ್ ಉಡುಪಿ
**ಪ್ರಧಾನ ಕಾರ್ಯದರ್ಶಿ :** ಶ್ರೀ ಕೆ. ಮುರಳೀಧರ ಶರ್ಮಾ ನಿಟ್ಟೆ
**ಉಪಾಧ್ಯಕ್ಷರು :** 1) ಶ್ರೀ ಚಂದ್ರಶೇಖರ ರಾವ್, ಬೊಕ್ಕಸ 2) ಶ್ರೀ ಕೆ. ಪ್ರಭಾಕರ ರಾವ್, ಕಾಂತಾವರ
**ಜೊತೆ ಕಾರ್ಯದರ್ಶಿ :**
1) ಶ್ರೀ ಕೇಶವ ರಾವ್, ಕಾರ್ಕಳ 2) ಶ್ರೀ ಅಶೋಕ್ ಕುಮಾರ್, ಪುತ್ತೂರು
**ಕೋಶಾಧಿಕಾರಿ :** ಶ್ರೀ ಉದಯ ಬಾರ್ಕೂರು
**ಸಮಿತಿ ಸದಸ್ಯರು :** 1) ಶ್ರೀ ಕೃಷ್ಣ ರಾವ್, ಮೈಸೂರು 2) ಶ್ರೀ ರಾಘವೇಂದ್ರ ರಾವ್, ಸುರತ್ಕಲ್ 3) ಶ್ರೀ ಸಂತೋಷ್ ರಾವ್, ಬಂಟ್ವಾಳ
**ಗೌರವ ಸದಸ್ಯರು :** 1) ಶ್ರೀ ಸಿ.ಎಸ್. ರಾವ್, ಉಡುಪಿ 2) ಶ್ರೀ ಎನ್.ಕೆ. ಜಗನ್ನಿವಾಸ ರಾವ್, ಪುತ್ತೂರು 3) ಶ್ರೀ ಎಂ. ದೇವಾನಂದ ಭಟ್, ಬೆಳುವಾಯಿ.

ಧನ್ಯವಾದಗಳೊಂದಿಗೆ

**ಕೆ. ಮುರಳೀಧರ ಶರ್ಮಾ,** ಪ್ರಧಾನ ಕಾರ್ಯದರ್ಶಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು






# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ನಾಡಹಬ್ಬ' ಆಚರಣೆ




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಸರಾ ನಾಡಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ವಿವಿಧ ಪಾರಾಯಣ ಬಳಿಕ ಸುಗಮ ಸಂಗೀತ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆ, ಹುಲಿಕುಣಿತ ಸ್ಪರ್ಧೆಗಳು ನಡೆದವು. ಶ್ರೀ ಸಭಾದ ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಕಾರ್ತಿಕ್ ಕುಡುಪು, ಶ್ರೀ ರವಿಶಂಕರ್ ರಾವ್, ಶ್ರೀಮತಿ ಮಂಜುಳಾ ಮುರಳೀಧರ್, ವಿದುಷಿ ರಾಧಾ ಮುರಳೀಧರ್, ಶ್ರೀಮತಿ ಭುವನಾ ನಾಗರಾಜ್ ತೀರ್ಪುಗಾರರಾಗಿ ಸಹಕರಿಸಿದರು. ಬಳಿಕ ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನ ವತಿಯಿಂದ ಯಕ್ಷಗಾನ ಕಲಾವಿದರಿಗೆ ಗೌರವ ಪ್ರದಾನ ಮತ್ತು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾಪುರಸ್ಕಾರ ನಡೆಯಿತು. ಭೋಜನ ಬಳಿಕ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ವತಿಯಿಂದ ಶ್ರೀ ಸಂಜಯ್ ಕುಮಾರ್ ಫಲಿಮಾರ್ ನಿರ್ದೇಶನದ 'ತ್ರಿಪುರ ಮಥನ' ಯಕ್ಷಗಾನ ಪ್ರದರ್ಶಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಭಾ ಜೊತೆ ಕಾರ್ಯದರ್ಶಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್ ಬಿ.ಎಸ್., ಶ್ರೀ ಎಸ್. ಚೇತನ್ ಶರ್ಮ, ಯುವವೇದಿಕೆ ಅಧ್ಯಕ್ಷರಾದ ಶ್ರೀ ಅನಿಲ್ ನೆಲ್ಲಿಕುಂಜೆ, ಮಹಿಳಾವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಗೌರವ ಅಧ್ಯಕ್ಷೆ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಉಪಾಧ್ಯಕ್ಷರುಗಳಾದ ಡಾ। ಜಯಲಕ್ಷ್ಮೀ, ಶ್ರೀಮತಿ ಸ್ನೇಹಲತಾ ದಿವಾಕರ್ ವ್ಯವಸ್ಥೆಯಲ್ಲಿ ಸಹಕರಿಸಿದರು. ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರುಗಳಾದ ಡಾ. ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್ ಬಹುಮಾನ ವಿತರಿಸಿದರು. ಬಹುಮಾನಗಳನ್ನು ಶ್ರೀ ಪ್ರವೀಣ್ ಅಧ್ಯಪಾಡಿ, ಶ್ರೀಮತಿ ಭುವನಾ ನಾಗರಾಜ್, ಯಕ್ಷಗಾನವನ್ನು ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಪ್ರಾಯೋಜಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಯುವವೇದಿಕೆ ಉಪಾಧ್ಯಕ್ಷ ಶ್ರೀ ಸುರೇಶ್ ಕಡಬ ಧನ್ಯವಾದ ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಪ್ರಗತಿಪರ ಕೃಷಿಕ, ಶ್ರಮಜೀವಿ **ಕಬ್ಬಿನಾಲೆ ಗುಬ್ಬಿಮಾರು ಮುತ್ತಯ್ಯ ಹೆಬ್ಬಾರ್** (82) ಇವರು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ, ಐವರು ಪುತ್ರಿಯರು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

●●●



ದಿ। ಸುರೇಶ್ ಶಾನುಭೋಗ್‌ರವರ ಧರ್ಮಪತ್ನಿ **ಶ್ರೀಮತಿ ಗಿರಿಜಾ ಶಾನುಭೋಗ್ (66)** ತಾರೀಕು 10–10–2023ರ ಮಂಗಳವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



**ಶಿರ್ತಾಡಿ ಕೃಷ್ಣರಾಜ್ ರಾವ್** (75) ತಾರೀಕು 23–10–2023ನೇ ಸೋಮವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ.

●●●



**ತಾಳೆಪ್ಪಾಡಿ ಚಂದ್ರಶೇಖರ ರಾವ್** (73) ತಾರೀಕು 22–10–2023ನೇ ರವಿವಾರ ಮೈಸೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಕಾಸರಗೋಡು ಮನ್ನಿಪ್ಪಾಡಿ ದಿ। ಎಂ. ವ್ಯಾಸ ಅವರ ಧರ್ಮಪತ್ನಿ **ಶ್ರೀಮತಿ ಶಶಿಕಲಾ ವ್ಯಾಸ** (75) ತಾರೀಕು 31–10–2023ನೇ ಮಂಗಳವಾರ ನಿಧನ ಹೊಂದಿದರು. ಅವರು ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಕಳಸ ಶ್ರೀ ಗುರುರಾಜ್ ರಾವ್ ಇವರ ಧರ್ಮಪತ್ನಿ **ಶ್ರೀಮತಿ ವಿಶಾಲಾಕ್ಷಿ ಅಡೂರು** (47) ಇವರು ತಾ. 9–11–2023ನೇ ಗುರುವಾರ ನಿಧನ ಹೊಂದಿದರು. ಅವರು ಪತಿ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

## ಶುಭ ವಿವಾಹ

ಕುಂಜಾರುಗಿರಿ ಶ್ರೀ ಸದಾಶಿವ ರಾವ್ ಮತ್ತು ಶ್ರೀಮತಿ ಆಶಾಲತಾರವರ ಸುಪುತ್ರಿ **ಚಿ। ಸೌ। ಆಶಿತಾ** ಹಾಗೂ ನಂದಳಿಕೆ ದಿ। ಅನಿಲ್ ಕುಮಾರ್ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ಭಾರತಿಲಕ್ಷ್ಮೀರವರ ಸುಪುತ್ರ **ಚಿ। ನಂದಕುಮಾರ್**‌ರವರ ವಿವಾಹ ತಾರೀಕು 16–10–2023ರ ಸೋಮವಾರ ಕುಂಜಾರುಗಿರಿ 'ವ್ಯಾಸ ಮಾಧವ ಭವನ'ದಲ್ಲಿ ನಡೆಯಿತು.

❖❖❖

ಕಾಪು ಶ್ರೀ ಮಂಜುನಾಥ ರಾವ್ ಮತ್ತು ಶ್ರೀಮತಿ ಭುವನೇಶ್ವರಿರವರ ಸುಪುತ್ರಿ **ಚಿ। ಸೌ। ಪಲ್ಲವಿ** ಹಾಗೂ ಬಳ್ಳಕ್ಕಿಲ ಅರವಿಂದ ರಾವ್ ಮತ್ತು ಶ್ರೀಮತಿ ಸಾವಿತ್ರಿರವರ ಸುಪುತ್ರ **ಚಿ। ಸೌರಭ್** ಇವರ ವಿವಾಹ ತಾರೀಕು 26–10–2023ರ ಗುರುವಾರ ಹೊಸಬೆಟ್ಟುವಿನ 'ನವಗಿರಿ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

ಶ್ರೀಮತಿ ವಿದ್ಯಾ ರಾವ್ ಮುಂಬೈ ಇವರ ಪುತ್ರಿ **ಕುಮಾರಿ ಪ್ರಿಯಂಜಲಿ ರಾವ್** ಇವರು ಪುತ್ತೂರು ಸಮೀಪದ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ನಡೆದ ನವರಾತ್ರಿ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಿನಾಂಕ 22–10–2023 ಆದಿತ್ಯವಾರ ಶ್ರೀ ರಾಜರಾಜೇಶ್ವರೀ ದೇವರ ಸನ್ನಿಧಿಯಲ್ಲಿ ಪುಷ್ಪಾಂಜಲಿಯೊಂದಿಗೆ ತಮ್ಮ ನಾಟ್ಯ ಪ್ರದರ್ಶನವನ್ನು ಆರಂಭಿಸಿ, ಮುಂದೆ ಅಣ್ಣಮ್ಮಾಚಾರ್ಯರ ಕೃತಿ ಶ್ರೀಮನ್ನಾರಾಯಣನ ಸೊಗಸಾದ ಅಭಿನಯ ನೀಡಿದರು. ಮುಂದೆ ಅಯಿಗಿರಿ ನಂದಿನಿ, ಪುರಂದರದಾಸರ ದೇವರ ನಾಮ, ಭಾಗ್ಯದ ಲಕ್ಷ್ಮೀ ಬಾರಮ್ಮ ಹಾಗೂ ದೇವಿಯ ಹಲವಾರು ಕೃತಿಗಳನ್ನು ಪ್ರದರ್ಶಿಸಿ 'ತಿಲ್ಲಾನ'ದೊಂದಿಗೆ ಭರತನಾಟ್ಯವನ್ನು ಮುಕ್ತಾಯಗೊಳಿಸಿದರು. ಶ್ರೀ ದೇವಳದ ಆಡಳಿತ ಮಂಡಳಿ ಶುಭವನ್ನು ಹಾರೈಸುತ್ತಾ ದೇವರ ಅನುಗ್ರಹ ಸದಾ ಇರಲಿ ಎಂದು ಕೋರಿದರು.



ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**

ಹಾಗೂ

**ಶ್ರೀಮತಿ ಆರತಿ ಶರ್ಮ**

'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ

ಮಂಗಳೂರು - 575 002 ✆ : 9880258216

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಅಲೆವೂರು ಶ್ರೀ ಶ್ಯಾಮ ರಾವ್ ಮತ್ತು ಶ್ರೀಮತಿ ಸಾವಿತ್ರಿ ರಾವ್‌ರವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 50,000/– ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀಮತಿ ಸುಜಾತ ಬೆಳ್ಳೆ, ಶ್ರೀಮತಿ ಸುರೇಖಾ ಶರ್ಮ ಉಪಸ್ಥಿತರಿದ್ದರು.


ಶ್ರೀಮತಿ ಇಂದಿರಾ ದೇವರಾವ್ ಶಾನುಭೋಗ್ ತನ್ನ ಮಕ್ಕಳ ಜತೆಗೂಡಿ ತಮ್ಮ ಪತಿ ಮಹಾರಾಷ್ಟ್ರ ವಿಟ್ಟಾ ನಿವಾಸಿಯಾಗಿದ್ದ ಪರೀಕ ಶ್ರೀ ದೇವರಾವ್ ಶಾನುಭೋಗ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 51,000/– ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ದೇಣಿಗೆಯನ್ನು ಪಡೆದಿದ್ದು, ಅವರ ಕುಟುಂಬಸ್ಥರು ಉಪಸ್ಥಿತರಿದ್ದರು.





ಮಂಗಳೂರು ನಿವಾಸಿ ಸಾಂತೂರ್ ಡಾ| ದಿವಾಕರ್ ರಾವ್ ತಮ್ಮ ಮಾತಾಪಿತರಾದ ಸಾಂತೂರ್ ಶ್ರೀ ಜನಾರ್ದನಯ್ಯ ಮತ್ತು ಶ್ರೀಮತಿ ಜಲಜಾಕ್ಷಿ ಸ್ಮರಣಾರ್ಥ ತಮ್ಮ ಜನುಮ ದಿನದ ಪ್ರಯುಕ್ತ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 50,000/– ಮತ್ತು ಶ್ರೀ ಸಭಾದ ವಿದ್ಯಾರ್ಥಿ ವೇತನ ನಿಧಿಗೆ ರೂ. 50,000/– ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಧರ್ಮಪತ್ನಿ ಶ್ರೀಮತಿ ಸ್ನೇಹಲತಾ ದಿವಾಕರ್, ಪುತ್ರ ಶ್ರೀ ಅಮರದೀಪ್, ಸೊಸೆ ಶ್ರೀಮತಿ ತನುಜಾ ಅಮರದೀಪ್, ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.

ಮಂಗಳೂರು ಕಾವೂರು ನಿವಾಸಿ, ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ ಶ್ರೀ ಜಿ. ದಿವಾಕರ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 25,000/– ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ದೇಣಿಗೆ ಸ್ವೀಕರಿಸಿದರು.



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಶ್ರೀ ಬಿ. ಎಚ್. ವಾಸುದೇವ ಪ್ರಸಾದ್ ಇವರು ವಾಷಿಂಗ್ ಮೆಷಿನ್, ಶ್ರೀಮತಿ ಸುಮಂಗಲಾ ಪ್ರಭಾಕರ್ ಮರದ ಟೇಬಲ್, 4 ಪ್ಲಾಸ್ಟಿಕ್ ಕುರ್ಚಿಗಳು, ರಾಕಿಂಗ್ ಚೆಯರ್ ಮತ್ತು ಕನ್ನಡಿ, ಶ್ರೀ ಅಶೋಕ್ ನಂದಾವರ 2 ಟ್ರೋಲಿ ಮತ್ತು ಶ್ರೀ ತುಷಾರ್ ಸ್ಟೀಲ್ ಕಪಾಟು, ಮರದ ಕುರ್ಚಿಗಳನ್ನು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು.

**'ಶಿವಸದನ' ವಸತಿನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ರೂ. 1,28,53,000/– ಸಾಲ ಬಾಕಿ ಇರುತ್ತದೆ. ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಸಸ್ಯಾಹಾರಿ ಊಟೋಪಚಾರ ಲಭ್ಯವಿರುತ್ತದೆ. ಅಪೇಕ್ಷಿತರಿಗೆ ಮಾಹಿತಿನೀಡಿ ಸಹಕರಿಸಿ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359. ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598.**

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**



**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR



# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್
# 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿ

ದಿನಾಂಕ 08–10–2023ನೇ ರವಿವಾರ ಸಂಘದ ವಾರ್ಷಿಕ ಮಹಾಸಭೆಯು ಪೂರ್ವಾಹ್ನ ಗಂಟೆ 10–30ಕ್ಕೆ ಸರಿಯಾಗಿ ಸುರತ್ಕಲ್‌ನ ಇಡ್ಯಾ ವಿದ್ಯಾದಾಯಿನಿ ಪ್ರೌಢಶಾಲೆಯ 'ವಜ್ರಮಹೋತ್ಸವ ಸಭಾಂಗಣ'ದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶ್ಯಾನುಭೋಗರವರು ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ರಾವ್, ಕಾರ್ಯದರ್ಶಿಗಳಾದ ಶ್ರೀ ಫಾಲಚಂದ್ರ ಶರ್ಮ ಎಂ., ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್ ಸಿ., ಪಡುಬಿದ್ರಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳಾ ಪ್ರಶಾಂತ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಕಾರ್ತಿಕ್ ಕೆ. ರಾವ್ ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಕು। ಸಂಜನಾ ರಾವ್ ನಡೆಸಿಕೊಟ್ಟರು. ಶ್ರೀ ವಾಸುದೇವ ಶ್ಯಾನುಭೋಗರು ಎಲ್ಲಾ ಅತಿಥಿಗಳನ್ನು, ಮಾನ್ಯ ಸದಸ್ಯರುಗಳನ್ನು ಹಾಗೂ ಸಮಾಜ ಬಾಂಧವರನ್ನು ಸ್ವಾಗತಿಸಿದರು. ಬಳಿಕ 2022–23ನೇ ಸಾಲಿನಲ್ಲಿ ದೈವಾಧೀನರಾಗಿರುವ ನಮ್ಮ ಸಂಘದ ಸದಸ್ಯರುಗಳ ಹೆಸರನ್ನು ವಾಚಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಶ್ರೀ ಫಾಲಚಂದ್ರ ಶರ್ಮ ಇವರು ವಾರ್ಷಿಕ ಮಹಾಸಭೆಯ ನೋಟೀಸನ್ನು ಹಾಗೂ ವಾರ್ಷಿಕ ವರದಿಯನ್ನು ಓದಿ ಸಭೆಯಿಂದ ಅಂಗೀಕಾರ ಪಡೆದರು. ಶ್ರೀ ರಾಘವೇಂದ್ರ ರಾವ್ ಇವರು ವಾರ್ಷಿಕ ಲೆಕ್ಕಪತ್ರ, ಆಸ್ತಿ–ಜವಾಬ್ದಾರಿ ತಖ್ತೆ, ಖರ್ಚು–ವೆಚ್ಚದ ಪತ್ರ ಹಾಗೂ ಮುಂದಿನ ವರ್ಷದ ಅಂದಾಜು ಆಯ–ವ್ಯಯ ಪತ್ರವನ್ನು ಓದಿ ಸಭೆಯಿಂದ ಅಂಗೀಕಾರ ಪಡೆದುಕೊಂಡರು. ಶ್ರೀ ನಾಗರಾಜ ಶರ್ಮ ಇವರನ್ನು ಮುಂದಿನ ವರ್ಷಕ್ಕೂ ಲೆಕ್ಕಪರಿಶೋಧಕರನ್ನಾಗಿ ಮರುಆಯ್ಕೆ ಮಾಡಲಾಯಿತು. ನಂತರ ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ ರಾಯರ ನೇತೃತ್ವದಲ್ಲಿ 2023–25ನೇ ಸಾಲಿಗೆ ಹೊಸ ಆಡಳಿತ ಮಂಡಳಿಯನ್ನು ರಚಿಸಲಾಯಿತು.

ಗೌರವಾಧ್ಯಕ್ಷರಾಗಿ ಶ್ರೀ ಭವಾನಿಶಂಕರ ರಾವ್, ಅಧ್ಯಕ್ಷರಾಗಿ ಶ್ರೀ ರಾಘವೇಂದ್ರ ರಾವ್ ಸಿ., ಉಪಾಧ್ಯಕ್ಷರಾಗಿ ಶ್ರೀ ವಾಸುದೇವ ಶಾನುಭೋಗ ಮತ್ತು ಶ್ರೀಮತಿ ಪರಿಮಳಾ ಪ್ರಶಾಂತ್, ಕಾರ್ಯದರ್ಶಿಗಳಾಗಿ ಶ್ರೀ ಫಾಲಚಂದ್ರ ಶರ್ಮ, ಜೊತೆಕಾರ್ಯದರ್ಶಿಗಳಾಗಿ ಶ್ರೀ ಪ್ರವೀಣ್ ಕುಮಾರ್ ಮತ್ತು ಶ್ರೀ ಜನಕರಾಜ್, ಕೋಶಾಧಿಕಾರಿಯಾಗಿ ಶ್ರೀ ರಾಧಾಕೃಷ್ಣ ರಾವ್ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶ್ರೀ ಶಿವಪ್ರಸಾದ ಶ್ಯಾನುಭೋಗ್, ಶ್ರೀ ಸಿ. ಸುದರ್ಶನ್ ರಾವ್, ಶ್ರೀ ಹರಿನಾರಾಯಣ ರಾವ್, ಶ್ರೀ ಸತೀಶ್ಚಂದ್ರ ರಾವ್, ಶ್ರೀಮತಿ ಶುಭಾ ಜಗದೀಶ್, ಶ್ರೀ ಕೆ. ಮಂಜುನಾಥ ರಾವ್ ಹಾಗೂ ಶ್ರೀ ಸಿ. ಸುರೇಶ್ ರಾವ್ ಅಂತೆಯೇ ಗೌರವ ಸಲಹೆಗಾರರಾಗಿ ಮತ್ತು ವಿಶೇಷ ಆಹ್ವಾನಿತರಾಗಿ ಶ್ರೀ ಕೆ. ಮಾಧವ ರಾವ್, ಶ್ರೀ ವೈ. ವಿ. ರತ್ನಾಕರ ರಾವ್, ಶ್ರೀ ಗೋಪಾಲಕೃಷ್ಣ, ಶ್ರೀ ಕೆ. ಪ್ರಭಾಕರ ರಾವ್ ಮತ್ತು ಶ್ರೀ ಪಿ. ಜಗದೀಶ್‌ರವರು ಆಯ್ಕೆಯಾಗಿರುತ್ತಾರೆ.

ಇದೇ ಸಮಯದಲ್ಲಿ ನಮ್ಮ ಸಂಘದ ಅಂಗಸಂಸ್ಥೆಗಳಾದ ಮಹಿಳಾ ವೇದಿಕೆ ಹಾಗೂ ಯುವವೇದಿಕೆಯನ್ನು ನೂತನವಾಗಿ ರಚಿಸಲಾಯಿತು. ಮಹಿಳಾ ವೇದಿಕೆಗೆ ಅಧ್ಯಕ್ಷರಾಗಿ ಶ್ರೀಮತಿ ಸುನೀತಾ ಶ್ರೀಕಾಂತ್, ಉಪಾಧ್ಯಕ್ಷರಾಗಿ ಶ್ರೀಮತಿ ವೀಣಾ ಅರವಿಂದ್, ಕಾರ್ಯದರ್ಶಿಯಾಗಿ ಶ್ರೀಮತಿ ಸಾವಿತ್ರಿ ಪುಷ್ಪರಾಜ್, ಜೊತೆಕಾರ್ಯದರ್ಶಿ ಮತ್ತು ಇನ್ನುಳಿದ 8 ಜನ ಸದಸ್ಯರು ಆಯ್ಕೆಯಾದರು. ಅದರಂತೆ ಯುವವೇದಿಕೆಯ ಅಧ್ಯಕ್ಷರಾಗಿ ಶ್ರೀ ಸಂದೀಪ್ ಶ್ಯಾನುಭೋಗ್, ಉಪಾಧ್ಯಕ್ಷರಾಗಿ ಶ್ರೀ ಅಶ್ವಿನ್ ಕುಮಾರ್, ಕಾರ್ಯದರ್ಶಿಯಾಗಿ ಶ್ರೀ ಸಂಕೇತ್ ಶ್ಯಾನುಭೋಗ್, ಅವರೊಂದಿಗೆ ಜೊತೆಕಾರ್ಯದರ್ಶಿ ಮತ್ತು 8 ಜನ ಸದಸ್ಯರುಗಳು ಆಯ್ಕೆಗೊಂಡಿರುತ್ತಾರೆ. ಶ್ರೀ ಕೆ. ಪ್ರಭಾಕರ ರಾಯರು ಸಂಘದ ಬೆಳವಣಿಗೆಗೆ ಪೂರಕವಾದ ಅಂಶಗಳನ್ನು ಹೇಳಿದರು. ಶ್ರೀ ಗೋಪಾಲಕೃಷ್ಣ ಇವರು ಧನ್ಯವಾದಗಳನ್ನು ತಿಳಿಸಿದರು.



ಅನಂತರ ನಡೆದ ಸಭೆಯಲ್ಲಿ ಹಿರಿಯರಾದ ಶ್ರೀ ಕರುಣಾಕರ ಶರ್ಮ ತಡಂಬೈಲ್, ಶ್ರೀಮತಿ ಸೀತಾರತ್ನ ಅನಂತಕೃಷ್ಣ ರಾವ್ ಹಾಗೂ ಝೀ ಕನ್ನಡ ಟಿವಿ ವಾಹಿನಿಯ ಸೀಸನ್ – 19 ರನ್ನರ್‌ಅಪ್ ಆದ ನಮ್ಮ ಸಮಾಜದ ಬಾಲ ಪ್ರತಿಭೆಯಾದ ಕು। ತನುಶ್ರೀ ಮಂಗಳೂರು ಇವರನ್ನು ಸಭೆಯಲ್ಲಿ ಪರಿಚಯಿಸಿ ಸನ್ಮಾನಿಸಲಾಯಿತು. ಈ ಸಮಯದಲ್ಲಿ ವೇದಿಕೆಯಲ್ಲಿ ಸಂಘದ ನೂತನ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಸಿ., ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಮುಖ್ಯಅತಿಥಿಗಳಾದ ಶ್ರೀ ಪಿ. ಸತೀಶ್ ರಾವ್ ಕಬಕ, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್, ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ ರಾವ್, ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ – ಇದರ ಅಧ್ಯಕ್ಷರಾದ ಶ್ರೀ ಕೇಶವ ರಾವ್, ವಿಮಾನ ನಿಲ್ದಾಣ ಪ್ರಾಧಿಕಾರದ ಮಾಜಿ ನಿರ್ದೇಶಕರು ಮತ್ತು ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಮಾಜಿ ಅಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವ, ಮಹಿಳಾ ವೇದಿಕೆಯ ನೂತನ ಅಧ್ಯಕ್ಷೆ ಶ್ರೀಮತಿ ಸುನೀತಾ ಶ್ರೀಕಾಂತ್, ಯುವ ವೇದಿಕೆಯ ನೂತನ ಅಧ್ಯಕ್ಷರಾದ ಶ್ರೀ ಸಂದೀಪ್ ಶ್ಯಾನುಭೋಗ್ ಉಪಸ್ಥಿತರಿದ್ದರು.

ಪ್ರಾರ್ಥನೆಯನ್ನು ಕು। ಸೌಜನ್ಯ ಫಾಲಚಂದ್ರ ಶರ್ಮರವರು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಸಿ. ಇವರು ವೇದಿಕೆಯಲ್ಲಿರುವ ಎಲ್ಲಾ ಗಣ್ಯರನ್ನು, ಸಭೆಯಲ್ಲಿ ಆಸೀನರಾಗಿರುವ ಸಂಘದ ಸದಸ್ಯರನ್ನು, ಸಮಾಜ ಬಾಂಧವರನ್ನು ಸ್ವಾಗತಿಸಿ ಗೌರವ ಅರ್ಪಿಸಿದರು. ಜ್ಯೋತಿಪ್ರಜ್ವಲನೆಯ ಬಳಿಕ ಹಿರಿಯಚೇತನಗಳನ್ನು ಹಾಗೂ ಬಾಲಪ್ರತಿಭೆಗಳನ್ನು ಸನ್ಮಾನಿಸಲಾಯಿತು. ಸಂಘದ ವಿದ್ಯಾನಿಧಿ ಹಾಗೂ ದಾನಿಗಳ ಸಹಕಾರದಿಂದ ಸಂಘದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು.

ಅತಿಥಿಗಳು ತಮ್ಮ ಭಾಷಣದಲ್ಲಿ ಸಂಘದ ಬಲವರ್ಧನೆಗಾಗಿ ಇನ್ನುಳಿದ ಸದಸ್ಯರನ್ನು ಬರುವಂತೆ ಮಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ತಮ್ಮ ಮಾತುಗಳ ಮೂಲಕ ಪ್ರತಿಪಾದಿಸಿದರು. ಅತಿಥಿಗಳಾದ ಶ್ರೀ ದೇವಾನಂದ ಭಟ್, ಶ್ರೀ ಎಂ.ಆರ್. ವಾಸುದೇವ, ಶ್ರೀ ಕೇಶವ ರಾವ್ ಹಾಗೂ ಶ್ರೀ ಎಂ. ಕೆ. ಮೋಹನ ರಾವ್ ಅವರುಗಳು ಸಂಘವು ನಡೆಸುವ ಕಾರ್ಯಕ್ರಮಗಳಿಗೆ ಪ್ರೋತ್ಸಾಹದ ಮಾತುಗಳನ್ನಾಡಿ ಮುಂಬರುವ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಹೊಂದಿ ಇತರರಿಗೆ ಮಾದರಿ ಸಂಘವಾಗಲೆಂದು ಹಾರೈಸಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಇನ್ನು ಮುಂದಿನ ಕಾರ್ಯಚಟುವಟಿಕೆಗಳಿಗೆ ಸರ್ವರ ಸಹಕಾರವನ್ನು ಕೋರಿದರು. ಅನಂತರ ಮಹಿಳಾ ವೇದಿಕೆ, ಯುವವೇದಿಕೆ ಹಾಗೂ ಮಕ್ಕಳಿಂದ ನಡೆದ ಹಾಡು, ನೃತ್ಯ, ಭರತನಾಟ್ಯ ಹಾಗೂ ಪ್ರಹಸನವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಈ ಎಲ್ಲಾ ಕಾರ್ಯಕ್ರಮಗಳ ನಿರೂಪಣೆಯನ್ನು ಶ್ರೀಮತಿ ಸುಧಾಮಣಿ ಫಾಲಚಂದ್ರ ಶರ್ಮ ಇವರು ಸುಂದರವಾಗಿ ಹಾಗೂ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಶ್ರೀ ಫಾಲಚಂದ್ರ ಶರ್ಮ ಇವರು ಧನ್ಯವಾದಗಳನ್ನರ್ಪಿಸಿ, ರಾಷ್ಟ್ರಗೀತೆ ಬಳಿಕ ಕಾರ್ಯಕ್ರಮವು ಮುಕ್ತಾಯ ವಾಯಿತು. ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical,
Plumbing and Sanitary works

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಾಡಹಬ್ಬ ಪ್ರಯುಕ್ತ ನಡೆದ 'ತ್ರಿಪುರ ಮಥನ'

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಾಡಹಬ್ಬ ಪ್ರಯುಕ್ತ ನಡೆದ 'ತ್ರಿಪುರ ಮಥನ' ಯಕ್ಷಗಾನದ ಪಾತ್ರಧಾರಿಗಳು

**ಈಶ್ವರ :** ಶ್ರೀ ನಾಗರಾಜ್ ವರ್ಕಾಡಿ, **ತಾರಕಾಕ್ಷ :** ಶ್ರೀಮತಿ ಅರುಣಾ ಸೋಮಶೇಖರ್, **ತ್ರಾಮ್ರಾಕ್ಷ :** ಶ್ರೀ ಸಂಜಯ್ ಕುಮಾರ್ ಫಲಿಮಾರ್, **ವಿದ್ಯುನ್ಮಾಲಿ :** ಶ್ರೀ ನಾಗರಾಜ್ ಶರ್ಮ, **ಚಂದ್ರ :** ಶ್ರೀ ಅನ್ವೇಷ್, **ದೇವೇಂದ್ರ :** ಶ್ರೀ ವಲ್ಲೀಶ್, **ಯಮ :** ಶ್ರೀ ನಾಗರಾಜ್ ರಾವ್ ವಿಟ್ಲ, **ದೇವೇಂದ್ರ ದೂತ :** ಶ್ರೀ ಪಿ. ಶ್ರೀಕಾಂತ್ ರಾವ್, **ದೀರ್ಘಾಕ್ಷ :** ಶ್ರೀ ಪ್ರತೀಕ್ ಎಲ್ಲಂಗಳ, **ವಟುಗಳು :** ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಶ್ರೀಹರಿ, ಶ್ರೀ ಅನ್ವೇಷ್, ಶ್ರೀ ರಾಘವೇಂದ್ರ ರಾವ್, ಮಾ। ಅಲೋಕ್, ಮಾ। ಆದೀಶ್, **ಸರಸ್ವತಿ :** ಕು। ವೈಭವಲಕ್ಷ್ಮೀ, **ಆದಿಶೇಷ :** ಶ್ರೀ ಅನಿಲ್ ನೆಲ್ಲಿಕುಂಜೆ, **ಅನಂತ :** ಶ್ರೀ ರಘುವೀರ್ ಪೆರ್ಡೂರ್, **ವೀರಭದ್ರ :** ಶ್ರೀ ಅನ್ವೇಷ್, **ಬ್ರಹ್ಮ :** ಶ್ರೀ ಹರ್ಷಕುಮಾರ್ ಕೇದಿಗೆ, **ವಿಷ್ಣು :** ಕು। ನಂದಿತಾ ಎಸ್. ರಾವ್

**ಹಿಮ್ಮೇಳ :** ಭಾಗವತರು : ಶ್ರೀ ಸುಬ್ರಹ್ಮಣ್ಯ ಭಟ್ ಒಡ್ಡೂರ್ ಮತ್ತು ಶ್ರೀ ಅಶ್ವತ್ಥ್ ಭಟ್, **ಮದ್ದಳೆ :** ಶ್ರೀ ಗಣಪತಿ ಭಟ್ ಪೆರ್ಲ, **ಚೆಂಡೆ :** ಶ್ರೀ ಕೃಷ್ಣರಾಜ್ ಭಟ್ ನಂದಳಿಕೆ, **ಚಕ್ರತಾಳ :** ಶ್ರೀ ರಂಜಿತ್

**ಯಕ್ಷಗಾನ ಪ್ರಾಯೋಜಕರು : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್**

ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್



















**PREETHIKA AUTOMOBILES**

✆ 2493633
9845851573

*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
*Dealers in :*
**Minda Switches, M. K. Products, Swiss Auto Products, Power Coils**


Prop. : SUDHAKAR BELLE
✆ : 9845193103/ 9481563103

**KARAN DIGITAL STUDIO**

Sadasukh Building
Nr. Postoffice, Padubidri - 574 111

Opp. Busstand
Belman


All Marriage & Other functions
Photography & Videography Available


ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –

**G. K. KOLPE**
House No. 7–3–31–D1, 'Vaishnavi' (Upstairs)
Vadiraja 2nd Cross, Bailakere, Udupi - 576 101
**Mobile : 9449903002**



ಪುತ್ತೂರಿನ ಮಾಸ್ಟರ್ ಪ್ಲಾನರಿಯ ಮಾಲಕರಾದ ಶ್ರೀ ಆನಂದ್ ಎಸ್.ಕೆ. ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **2,00,000** (ರೂಪ್ಯಾ ಎರಡು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಕುಟುಂಬದ ಶ್ರೀಮತಿ ಆರತಿ ಎಸ್.ಕೆ., ಶ್ರೀಮತಿ ನಿಶಾ ಪೈ, ಶ್ರೀ ಆಕಾಶ್ ಎಸ್. ಕೆ., ಶ್ರೀಮತಿ ರೇಖಾ ಆನಂದ್, ಶ್ರೀ ಅರ್ಜುನ್ ಎಸ್.ಕೆ., ಮತ್ತು ರಾಜೇಶ್ ಪ್ರೆಸ್ ಮ್ಹಾಲಕರಾದ ಶ್ರೀ ರಘುನಾಥ ರಾವ್, ಶ್ರೀಮತಿ ಶ್ಯಾಮಲಾ ರಾವ್, ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*